O.S. ನಂಬರಃ 34/2020

ಡಿ. ಡಬ್ಲ್ಯೂಃ 1

ದಿಃ 15-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 19, 20 ಮತ್ತು 22 ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಬಿ.ಡಿ.ಎನ್ ಇವರಿಂದಃ

ನಿಮ್ಮ ಪ್ರಕಾರ ನೀವು ಬೊಬ್ರಿ ಬೀರಪ್ಪ ನಾಯ್ಕ ಇವರ ಮಗ ಎಂದರೆ ಸರಿ. ದಿನ್ನಾ ಬೀರಪ್ಪ ನಾಯ್ಕ ಮತ್ತು ಗಣಪತಿ ಬೀರಪ್ಪ ನಾಯ್ಕ ಇವರು ನಿಮ್ಮ ತಂದೆಯ ಸಹೋದರರು ಎಂದರೆ ಸರಿ. ನಿಮ್ಮ ತಂದೆ ಹಾಗೂ ಅವರ ಸಹೋದರರು ನಿಮ್ಮ ಅಜ್ಜ ಮರಣಪಟ್ಟ ನಂತರ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಅದರಂತೆ ಗಣಪತಿ ಬೀರಪ್ಪ ನಾಯ್ಕ ಈತನೂ ಸಹ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾ ಬ ಪರಿಶಿಷ್ಟ 2 ನೇ ಆಸ್ತಿಯು ಗಣಪತಿ ಬೀರಪ್ಪ ನಾಯ್ಕ ಇವರಿಗೆ ಸಂಬಂಧಪಟ್ಟ ಆಸ್ತಿ ಎಂದರೆ ಸರಿ. ಗಣಪತಿ ಬೀರಪ್ಪ ನಾಯ್ಕ ಇವರು ತೀರಿಕೊಂಡ ನಂತರ 22ನೇ ಪ್ರತಿವಾದಿಯು ಸದರಿ ಮನೆಯಲ್ಲಿ ವಾಸಮಾಡುತ್ತಿದ್ದಾನೆ ಎಂದರೆ ಸರಿ. ಈಗ ಆತನು ಸರ್ಕಾರದ ಬಸವ ಯೋಜನೆ ಅಡಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾನೆ ಎಂದರೆ ಸರಿ. ಅವರೆಲ್ಲರೂ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಂತೆ ಜಮೀನೂಗಳನ್ನೂ ಸಹ ಪ್ರತ್ಯೇಕವಾಗಿ ಉಳುಮೆ ಮಾಡಿಕೊಂಡು ಬಂದಿರುತ್ತಾರೆ

ಎಂದರೆ ಸರಿ. ಅವರೆಲ್ಲ ಉಳುಮೆ ಮಾಡಿಕೊಂಡು ಬಂದಂತಹ ಜಮೀನುಗಳು ಮೂಲತಃ ಯಾರ ಜಮೀನುಗಳು ಆಗಿದ್ದವು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ತಂದೆಯ ಹೆಸರಿನಲ್ಲಿದ್ದ ದಾಖಲಾತಿಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳು ನಿಮ್ಮ ಮಾಲ್ಕಿ ಹಕ್ಕಿನ ಜಮೀನುಗಳು ಆಗಿರಲಿಲ್ಲ, ಅವು ಮೂಲತಃ ಒಡೆಯನ ಜಮೀನುಗಳು ಆಗಿದ್ದವು ಎಂದರೆ ಸರಿ. ನಿಮ್ಮ ತಂದೆಯವರು ಯಾವ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಸರ್ವೆ ನಂ.298/3 ಮತ್ತು ಸರ್ವೆ 341 ಗದ್ದೆ ಜಮೀನುಗಳು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು 2 ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿದ್ದು, ಅದೇ ಪ್ರಕಾರ ದಿನ್ನಾ ಬೀರಪ್ಪ ನಾಯ್ಕ ಮತ್ತು ಗಣಪತಿ ಬೀರಪ್ಪ ನಾಯ್ಕ ಇವರೂ ಸಹ ಪ್ರಪ್ರತ್ಯೇಕವಾಗಿ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ನಿಮ್ಮ ತಂದೆಯವರು ಸಾಗುವಳಿ ಮಾಡುವ ಸಮಯದಲ್ಲಿ ಸದರಿ ಜಮೀನುಗಳು ನಿಮ್ಮ ತಂದೆಯವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಮತ್ತು ಅವರ ಸಹೋದರರು ಭೂ-ನ್ಯಾಯಮಂಡಳಿಗೆ ಫಾರಂ ನಂ.7 ಇದನ್ನು ಪ್ರತ್ಯೇಕವಾಗಿ ಸಲ್ಲಿಸಿದ್ದರಿಂದ ಅವರು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದ ಜಮೀನುಗಳಿಗೆ ಭೂ-ನ್ಯಾಯಮಂಡಳಿ ಸದರಿ ಜಮೀನುಗಳನ್ನು ಮಂಜೂರು ಮಾಡಿರುತ್ತದೆ ಎಂದರೆ ಸರಿ. ಅದೇ ರೀತಿ ನಿಮ್ಮ ತಂದೆಯವರಿಗೂ ಸಹ ಪ್ರತ್ಯೇಕವಾಗಿ ಜಮೀನು ಮಂಜೂರು ಆಗಿರುತ್ತದೆ ಎಂದರೆ ಸರಿ. ಅದೇ ಪ್ರಕಾರ 19 ರಿಂದ 22ನೇ ಪ್ರತಿವಾದಿಯರ ತಂದೆಯಾದ ಗಣಪತಿ ನಾಯ್ಕ ಇವರಿಗೂ ಸಹ ಪ್ರತ್ಯೇಕವಾಗಿ ಜಮೀನು

ಮಂಜೂರು ಆಗಿರುತ್ತದೆ ಎಂದರೆ ಸರಿ. ಅವರವರಿಗೆ ಮಂಜೂರು ಆದ ಜಮೀನುಗಳನ್ನು ಅವರವರು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಅದೇ ರೀತಿ ಗಣಪತಿ ಬೀರಪ್ಪ ನಾಯ್ಕ ಇವರು ಮರಣಪಟ್ಟ ನಂತರ ಅವರ ಮಕ್ಕಳಾದ 19 ರಿಂದ 22ನೇ ಪ್ರತಿವಾದಿಯರು ವಾರಸಾ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾರಸಾ ಆದ ನಂತರ ಅವರು ದಿಃ18-03-2015 ರಲ್ಲಿ ವಾಂಟಣಿ ಪತ್ರ ಮಾಡಿಕೊಂಡು ನೊಂದಣಿ ಕಚೇರಿಯಲ್ಲಿ ನೊಂದಣಿ ಮಾಡಿ, ಪ್ರಪ್ರತ್ಯೇಕವಾದ ಜಮೀನುಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆ ಹಾಗೂ ನಿಮ್ಮ ತಂದೆಯ ಸಹೋದರರು ಟೆನೆನ್ಸಿ ಕಾಯ್ದೆ ಬರುವ ಪೂರ್ವದಲ್ಲಿ ಪ್ರಪ್ರತ್ಯೇಕವಾಗಿ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ಆದ ಕಾರಣ ಗಣಪತಿ ಬೀರಪ್ಪ ನಾಯ್ಕ ಇವರಿಗೆ ಮಂಜೂರಾದ ಜಮೀನುಗಳಲ್ಲಿ 19 ರಿಂದ 22ನೇ ಪ್ರತಿವಾದಿಯರನ್ನು ಬಿಟ್ಟರೆ ನಿಮಗಾಗಲಿ ಅಥವಾ ವಾದಿಗಾಗಲಿ ಮತ್ತು ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿ. 22ನೇ ಪ್ರತಿವಾದಿಯ ಕಟ್ಟಿಕೊಂಡು ವಾಸ್ತವ್ಯ ಮಾಡುತ್ತಿರುವ ಬ ಪರಿಶಿಷ್ಟ 5ನೇ ಆಸ್ತಿಯಲ್ಲಿ ನಿಮಗಾಗಲಿ ಅಥವಾ ವಾದಿಗಾಗಲಿ ಮತ್ತು ಉಳಿದ ಪ್ರತಿವಾದಿಗಳಿಗಾಗಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿ. ಈ ಎಲ್ಲ ಜಮೀನುಗಳು ಭೂ-ನ್ಯಾಯಮಂಡಳಿಯಿಂದ ಮಂಜೂರಾದ ಜಮೀನುಗಳು ಎಂದರೆ ಸರಿ. ಅವರವರಿಗೆ ಮಂಜೂರಾದ ಜಮೀನುಗಳಲ್ಲಿ ಅವರಿಗೆ ಮಾತ್ರ ಹಕ್ಕು ಇದ್ದು, ನಿಮಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸಾಕ್ಷಿಯು ಮನೆಯಲ್ಲಿ ಇರುವುದಿಲ್ಲ, ಜಮೀನುಗಳಲ್ಲಿ ಪಾಲು ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರಿಗೆ ಮಂಜೂರಾದ

ಜಮೀನುಗಳಲ್ಲಿ ಮಾತ್ರ ನಿಮಗೆ ಹಕ್ಕು ಇದ್ದು, ಬೇರೆ ಜಮೀನುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಜಮೀನಿನಲ್ಲಿ 3 ಮನೆಗಳನ್ನು ಕಟ್ಟಿಕೊಂಡಿದ್ದು, ಓಡಾಡಲು ದಾರಿ ಬೇಕಾಗಿದ್ದು, ತಂದೆಯ ಹೆಸರಿನಲ್ಲಿದ್ದ ಜಮೀನುಗಳಲ್ಲಿ ಪಾಲು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸರ್ವೆ ನಂ.298 ರಲ್ಲಿ 3 ಭಾಗವನ್ನು ಮಾಡಿ, ರಸ್ತೆಯನ್ನು ಮಾಡಿಕೊಡಬೇಕು ಎಂದು ನುಡಿಯುತ್ತಾರೆ. 19 ರಿಂದ 22ನೇ ಪ್ರತಿವಾದಿಯರ ತಂದೆಗೆ ಮಂಜೂರಾದ ಜಮೀನುಗಳಲ್ಲಿ ಸದರಿ ಪ್ರತಿವಾದಿಯರು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಸರಿ. ಸಾಕ್ಷಿಯು ಮುಂದುವರೆದು, ಆದರೆ ನಾವು ಬೇರೆ ಜಮೀನುಗಳಿಂದ ಓಡಾಡುತ್ತಿದ್ದು, ದಾರಿ ಬೇಕಾಗುತ್ತದೆ ಎಂದು ನುಡಿಯುತ್ತಾರೆ. 19 ರಿಂದ 22ನೇ ಪ್ರತಿವಾದಿಯರು ತಮ್ಮ ಜಮೀನುಗಳಲ್ಲಿ ಸಾಕಷ್ಟು ಹಣ ಖರ್ಚು ಮಾಡಿ ಅಭಿವೃದ್ಧಿಪಡಿಸಿದ್ದಾರೆ ಎಂದರೆ ಗೊತ್ತಿರುವುದಿಲ್ಲ. ದಿನ್ನಾ ಬೀರಪ್ಪ ನಾಯ್ಕ ಇವರಿಗೆ ಮಂಜೂರಾದ ಜಮೀನುಗಳಲ್ಲಿ ರಾಮಚಂದ್ರ ದಿನ್ನಾ ನಾಯ್ಕ ಮತ್ತು ಆತನ ಸಹೋದರರು ಸ್ವಲ್ಪ ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಮಾರಾಟ ಮಾಡಿದಂತಹ ಜಮೀನುಗಳ ಹಣವನ್ನು ಅವರೇ ಬಳಸಿಕೊಂಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. 2 ಮತ್ತು 3ನೇ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ.

ಪಾಟೀ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.